ರಾಡ ಬಾಗಲ ತಗುಸಯ್ಯ ||
ಕಿಚ್ಚಿಗಂಜ್ಯಾಳೆಂದು ಅಚ್ಚಡದ ತೆರೆಕಟ್ಟಿಸ್ದ
ಕಿಚ್ಚಿಗಂಜೋರ ಮಗಳಲ್ಲ । ಸಿರಿಗೊಂಡಗೌಡ
ಅಚ್ಚಡದ ತೆರೆಯಾ ತಗುಸಯ್ಯ ||
ಕೊಂಡ ಹತ್ತ್ಯಾಳೆ ಹಿಂದಾಕ ನೋಡ್ಯಾಳೆ
ಕೊಂಡದೀ ಕೆಂಡ ಸುಡದೆಂದು । ಮತ್ತೊಂದು
ಜೊತ್ತಾಲದ ಮರನಾ ಕಡಿಸ್ಯಾಳೆ ||
ನಿಂಬೀಯ ಹಣ್ಣ ಅಂಬಾರಕೀಡಾಡುತ
ಬಂದೀಯ ತೋಳ ತಿರುವುತ । ಮುತ್ತಣ್ಣನ
ರೆಂಬೆ ಕೊಂಡಾಕ ನಡೆದಾಳೆ ||
ದೂಳುಗುವುದಾವೆ ದುಕ್ಕದ ಮ್ವಾಡವೆದ್ದಾವೆ
ಏಳುಮಾರುದ್ದದ ಜಡೆಯೆಳೆದು । ಕಾಟಮ್ಮ
ದೂಳಲ್ಲಿ ನಲಿವುತ ನಡೆದಾಳು ||
ತುಪ್ಪದಾಗ ನೊಣಬಿದ್ದು ಕಣ್ಣಾಗ ಸೆದೆಬಿದ್ದು
ಪಟ್ಟೇದ ಸೀರ್ಯಾಗ ಕಿಡಿಬಿದ್ದು । ಕಾಟಮ್ಮನ
ವುಟ್ಟಾ ಸೀರೆಯಿಂದೆ ಉರುದಾವ ||
ಹಸಿಯಾ ತುಗ್ಗಲಿ ಮರ ಎಸಳೊಡೆದು ಬೇವಾಗ
ಅಸುಮಗಳು ಕಾಟಮ್ಮ ಮೆರಿವಾಗ । ಅಗ್ನುಣಿದೇವಿ
ಹಸನಾದ ನಗುವಾ ನಗುತಾಳೆ ||
ಸಣ್ಣಾ ತುಗ್ಗಲಿ ಮರ ಗಿಣ್ಣೊಡೆದು ಬೇವಾಗ
ಸಣ್ಣಾಮಗಳು ಕಾಟಮ್ಮ ಮೆರಿವಾಗ । ಅಗ್ನುಣಿದೇವಿ
ಸಣ್ಣಾಗೆ ನಗುವಾ ನಗುತಾಳೆ ||
ರೆಂಬೆ ಕಾಟಮ್ಮನ ಬಂದೀಯ ಕೆಳೆಗಾಳ
ಅಂದಾವ್ವೆದು ಮುತ್ತಾ ತಗುದು । ಗಂದಾದರುವೀಲಿ
ಕಂದನ ಸಂತೋಸಾಕೆಂದು ತಾಯಿ ಕಾಟಮ್ಮ
ನಂಬೀಗೆ ಕೊಡು ಅಟ್ಟೀ ಮಕ್ಕಳಿಗೆ
ಜಯಮಂಗಳಾ ರಾಮ ಸುಬ ಮಂಗಳಾ ||

ಮೇಲಿನ ಎಂಟೊಂಬತ್ತು ತ್ರಿಪದಿಗಳಲ್ಲಿ ಸತಿ ಸಹಗಮನದ ವಿವರಗಳೆಲ್ಲವೂ ಇವೆ. ಸಿರಿಯಜ್ಜಿ ಹೇಳಿದಂತೆ ಕಾಟಮ್ಮನು ಕೆಂಡಕೊಂಡವಾದದ್ದು ಬೆಳಗೆರೆ ಮತ್ತು ಹುಲಿಕುಂಟೆ ಗ್ರಾಮದ ನಡುವೆ. ಆಕೆಯ ಗಂಡ ಎಲ್ಲಿ ಹೇಗೆ ತೀರಿಕೊಂಡನೋ ಗೀತೆಯಲ್ಲಿ ದಾಖಲಾಗಿಲ್ಲ. ಕೇವಲ ಕಾಟಮ್ಮನು ಕೊಂಡಕ್ಕೆ ನಡೆದ ವಿವರಗಳೇ ತುಂಬಿವೆ. ಹಾಗೆ ಅವಳು ನಾಳೆ ಬೀಳಬೇಕಾದ ಬೆಂಕಿಗೆ ಹೆದರಿ ರಾತ್ರಿಯಲ್ಲಿ ಕದ್ದು ಹೋಗಿಬಿಡಬಹುದೆಂಬ ಎಚ್ಚರಿಕೆ, ಕದ್ದುಹೋಗಿ ಎಲ್ಲಿ ಬದುಕುವುದು ಎಂಬ ಭಯದಲ್ಲಿ, ಎಲ್ಲ ಸತಿಯರಂತೆ ಕಾಟವ್ವನು ಊರ ಬಾಗಿಲನ್ನು ಮುಚ್ಚಿಸುವ ಅಗತ್ಯವಿಲ್ಲ, ಬಾಗಿಲು ತೆಗೆಸು ನಾನು ಬೆಂಕಿಗೆ ಬಿದ್ದು ಸಾಯುವವಳೇ ಎನ್ನುವಾಗ ಅವಳಾಡುವ ಎದೆಯುರಿಯ ಮಾತು ಕೇಳುಗರನ್ನು ಕೆಂಡದ ಮೇಲೆ ಕೂರಿಸುವಂತಿದೆ. ಬಾಗಿಲು ಹಾಕಿಸುವ ಗೌಡನಿಗೆ ಆಕೆ